ಸಿ.ಸಿ.479/2025 ಪಿಡಬ್ಲ್ಯೂ-1

ದಿನಾಂಕಃ 07.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ಕುಮಾರ್ ರವರ ಜೊತೆ ಇದಕ್ಕೆ ಮೊದಲು ನಾನು ಹಣದ ವ್ಯವಹಾರವನ್ನು ಮಾಡಿಲ್ಲ. ಇದೇ ಹಣದ ಬಗ್ಗೆ ನಾನು ಒಂದು ಚೆಕ್ ಪ್ರಕರಣವನ್ನು ದಾಖಲು ಮಾಡಿದ್ದೆ. 2 ವರ್ಷದ ಮುಂಚೆ ದಾಖಲು ಮಾಡಿದ್ದೆ.

2. ಸದರಿ ಪ್ರಕರಣವನ್ನು ನಾನು ಅವರಿಗೆ ಕಷ್ಟ ಇದಿದ್ದರಿಂದ 2 ವರ್ಷದ ಹಿಂದೆ ವಾಪಸ್ಸು ಪಡೆದುಕೊಂಡಿದ್ದೇನೆ. ಸದರಿ ಸಂದರ್ಭದಲ್ಲಿ ನಾನು ಆರೋಪಿಯಿಂದ ಚೆಕ್ ನ್ನು ಪಡೆದಿರುತ್ತೇನೆ. ಪ್ರಸ್ತುತ ಪ್ರಕರಣವನ್ನು ಸದರಿ ಚೆಕ್ ನ ಮೇಲೆ ಹಾಕಿರುತ್ತೇನೆ. ನಾನು ಕೇಸನ್ನು ವಾಪಸ್ಸು ಪಡೆಯಬೇಕಾದರೆ ಈ ಚೆಕ್ ನಂಬರ್ ನ್ನು ಅದರಲ್ಲಿ ಬರೆದಿಲ್ಲ.

3. ನಾನು ನೋಟೀಸು ಕೊಡುವ ಕಾಲದಲ್ಲಿ ಹಳೇ ಪ್ರಕರಣದ ಬಗ್ಗೆ ನಮೂದು ಮಾಡಿಲ್ಲ. ನನ್ನ ದೂರಿನಲ್ಲೂ ಸಹಾ ಸದರಿ ವಿಚಾರವನ್ನು ನಮೂದು ಮಾಡಿರುವುದಿಲ್ಲ.

4. ಹಳೇ ಪ್ರಕರಣದ ಸಂದರ್ಭದಲ್ಲಿ ಆರೋಪಿಯಿಂದ 2 ಚೆಕ್ ಗಳನ್ನು ಪಡೆದಿದ್ದೆ. ನಿಪಿ-1 ರ ಚೆಕ್ ಸಹಾ ಅದರಲ್ಲಿ ಒಂದು ಎಂದರೆ ಸರಿ.

5. ಹಳೇ ಪ್ರಕರಣದಲ್ಲಿ ಪೂರ್ಣ ಹಣವನ್ನು ವಾಸಪ್ಸು ಮಾಡಿದ ನಂತರ ನೀವು ಆ ಪ್ರಕರಣವನ್ನು ಹಿಂದೆ ಪಡೆದಿರುತ್ತೀರ ಎಂದರೆ ಸರಿಯಲ್ಲ.

6. ಇನ್ನೊಂದು ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರನ್ನು ನೀಡಿದ್ದೀರ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.